# ಭಾರತೀಯ ಜನತಾ ಪಾರ್ಟಿ

(ಕೇಂದ್ರ ಕಚೇರಿ)

11, ಅಶೋಕ ರಸ್ತೆ, ನವದೆಹಲಿ–110001

ಖಜಟ. ಓಠ. : 23005700; ಈಚಿಥ : 23005787


## ಭಾಜಪ ರಾಷ್ಟ್ರೀಯ ವಕ್ತಾರ ಹಾಗೂ ಸಾಂಸದ ಶ್ರೀ ಪ್ರಕಾಶ್ ಜಾವ್ಡೆಕರ್ ಬುಧವಾರ 15 ಜನವರಿ 2014ರಂದು ನೀಡಿದ ಪತ್ರಿಕಾ ಪ್ರಕಟಣೆ

ಇಪಿಎಸ್ 95ರಡಿ(ಇಪಿಎಫ್ ಪಿಂಚಣಿ) ಸರ್ಕಾರ ಪ್ರಸ್ತಾಪಿಸಿದ ಸಾವಿರ ರೂಪಾಯಿ ಕನಿಷ್ಠ ಪಿಂಚಣಿಯ ಬದಲು ಮಾಸಿಕ ಮೂರು ಸಾವಿರ ರೂಪಾಯಿ ನಿಗದಿಪಡಿಸಬೇಕು ಎಂದು ಭಾಜಪ ಆಗ್ರಹಿಸುತ್ತದೆ. ಮಾಸಿಕ 1000 ರೂಪಾಯಿ, ಕೇವಲ ಔಪಚಾರಿಕವಾಗಿದ್ದು, ದೇಶದ ದುಡಿಯುವ ವರ್ಗಕ್ಕೆ ಅಪಕಾರ ಮಾಡಿದಂತಾಗಿದೆ. ಯೋಜನೆ ಅಡಿ ಸರ್ಕಾರ 1000 ರೂಪಾಯಿ ಕನಿಷ್ಠ ಪಿಂಚಣಿ ನೀಡುವ ಆಲೋಚನೆ ಹೊಂದಿದೆ ಎಂಬ ವರದಿ ಆಧರಿಸಿ ಭಾಜಪ ತನ್ನ ಆಗ್ರಹವಿಟ್ಟಿದೆ. ಬಹಳ ವಿಳಂಬದ ನಂತರ ಇಷ್ಟು ಸಣ್ಣಮೊತ್ತ ನೀಡುವ ಸರ್ಕಾರದ ಆಲೋಚನೆಯನ್ನು ಭಾಜಪ ಟೀಕಿಸುತ್ತದೆ. ಪಿಂಚಣಿ ಯೋಜನೆಯಡಿ ಪ್ರತಿತಿಂಗಳು ತಮ್ಮ ಪಾಲು ಜಮಾ ಮಾಡುವ 41 ಲಕ್ಷ ಪಿಂಚಣಿದಾರರು ಹಾಗೂ 50 ದಶಲಕ್ಷ ಕಾರ್ಮಿಕರ ಪಿಂಚಣಿ ಪ್ರಮಾಣವನ್ನು ಹೆಚ್ಚಿಸಬೇಕು ಎಂದು ಭಾಜಪ ನಿರಂತರ ಆಂದೋಳನ ನಡೆಸುತ್ತಿದೆ.

ಪ್ರತಿ ತಿಂಗಳು ನೀಡಲಾಗುವ ಕನಿಷ್ಠ ಪಿಂಚಣಿ ಪ್ರಮಾಣವನ್ನು ಮಾಸಿಕ 3000 ರೂಪಾಯಿಗಳಿಗೆ ಹೆಚ್ಚಿಸಬೇಕು ಹಾಗೂ ಇದನ್ನು ಹಣದುಬ್ಬರ ಸೂಚ್ಯಾಂಕದ ಆಧಾರದ ಮೇಲೆ ನಿಗದಿ ಪಡಿಸಬೇಕು ಎಂದು ಶ್ರೀ ಪ್ರಕಾಶ್ ಜಾವ್ಡೆಕರ್ ರಾಜ್ಯ ಸಭಾ ಅರ್ಜಿ ಸ್ವೀಕಾರ ಸಮಿತಿಗೆ ಮನವಿ ಸಲ್ಲಿಸಿದ್ದಾರೆ. ಎಲ್ಲಾ ಬೇಡಿಕೆಗಳನ್ನು ಒಪ್ಪಿದ್ದ ಅರ್ಜಿ ಸ್ವೀಕಾರ ಸಮಿತಿಯು ಮುಖ್ಯ ಬೇಡಿಕೆಗಳನ್ನು ಒಪ್ಪುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು ಹಾಗೂ ಯೋಜನೆ ಸುಧಾರಿಸುವ ಸಲಹೆಯನ್ನೂ ನೀಡಿತ್ತು. ಅರ್ಜಿ ಸ್ವೀಕಾರ ಸಮಿತಿಯು ತನ್ನ ವರದಿಯನ್ನು ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ಮಂಡಿಸಿತ್ತು. ಸರ್ವಾನುಮತದಿಂದ ಸಿದ್ಧಪಡಿಸಿದ ವರದಿಯನ್ನು ಒಪ್ಪುವ ಬದಲು ಸರ್ಕಾರ ಕಾರ್ಮಿಕ ಸಚಿವಾಲಯದ ಹಳೆ ಪ್ರಸ್ತಾಪಕ್ಕೆ ತಲೆ ದೂಗುತ್ತಿದೆ.

50 ದಶಲಕ್ಷಕ್ಕೂ ಹೆಚ್ಚು ಕಾರ್ಮಿಕರು ತಮ್ಮ ವೇತನದ ಶೇಕಡ 8.33ರಷ್ಟು ಮೊತ್ತವನ್ನು ಪಿಂಚಣೀ ಯೋಜನೆಯಡಿ ಜಮಾ ಮಾಡುತ್ತಿದ್ದಾರೆ. ಈ ಪಿಂಚಣಿ ಯೋಜನೆಗೆ ಸರ್ಕಾರ ಕೇವಲ ಶೇಕಡ 1.16ರಷ್ಟು ಕಾಣಿಕೆ ನೀಡುತ್ತದೆ. ಅತ್ಯಲ್ಪ ಕಾಣಿಕೆ ನೀಡುವ ಸರ್ಕಾರದ ಕ್ರಮದಿಂದ ಒಟ್ಟು 41 ಲಕ್ಷ ಪಿಂಚಣಿದಾರರಲ್ಲಿ 30 ಲಕ್ಷ ಪಿಂಚಣಿದಾರರಿಗೆ ಮಾಸಿಕ 1000 ರೂಪಾಯಿಗೂ ಮಿಕ್ಕಂತೆ ಪಿಂಚಣಿ ದೊರೆಯಲಿದೆ. 20 ಲಕ್ಷಕ್ಕೂ ಹೆಚ್ಚಿನ ಪಿಂಚಣಿದಾರರಿಗೆ ಮಾಸಿಕ 500 ರೂಪಾಯಿಗೂ ಕಡಿಮೆ ಪಿಂಚಣಿ ದೊರೆಯಲಿದೆ. ಸರ್ಕಾರ ಈಗ ತನ್ನ ಕಾಣಿಕೆಯನ್ನು ಶೇಕಡ 1.16ರಿಂದ ಕೇವಲ ಶೇಕಡ 1.79ಕ್ಕೆ ಏರಿಸುವ ಆಲೋಚನೆ ಮಾಡುತ್ತಿದೆ. ಸರ್ಕಾರ ತನ್ನ ಕಾಣಿಕೆಯನ್ನು ಕಾರ್ಮಿಕರ ಕಾಣಿಕೆಗೆ ಸಮವಾಗಿ ಅಂದರೆ ಶೇಕಡ 8.33ರಷ್ಟು ಏರಿಸಿದರೆ 3000 ರೂಪಾಯಿ ಕನಿಷ್ಠ ಪಿಂಚಣಿ ನೀಡಲು ಸಾಧ್ಯವಾಗಲಿದೆ ಮತ್ತು ಸೂಚ್ಯಾಂಕದ ಏರಿಳಿತದ ಅನುಸಾರ ಪಿಂಚಣಿ ನೀಡಬಹುದಾಗಿದೆ.

ಯುಪಿಎ ಸರ್ಕಾರ ಕಾರ್ಮಿಕ ವಿರೋಧಿ ಎಂದು ದೃಡಪಟ್ಟಿದೆ. ಕಾರ್ಮಿಕರ ಶೋಷಣೆ ಮುಂದುವರಿಸಿರುವ ಸರ್ಕಾರ ಕಾರ್ಮಿಕರನ್ನು ಗುತ್ತಿಗೆ ವ್ಯವಸ್ಥೆಯಡಿ ಮುಂದುವರಿಸುವ ಹುನ್ನಾರ ನಡೆಸಿದೆ. ಉದ್ಯೋಗ-ವೇತನ-ಸಾಮಾಜಿಕ ಭದ್ರತೆ ಸ್ವರೂಪದಡಿ ಕಾರ್ಮಿಕವರ್ಗವನ್ನು ತರುವ ಹೊಸ ಒಪ್ಪಂದಕ್ಕೆ ಭಾಜಪ ಬದ್ಧವಾಗಿದೆ.

(ಇಂಗ್. ಅರುಣ್ ಕುಮಾರ್ ಜೈನ್)
ಕಚೇರಿ ಕಾರ್ಯದರ್ಶಿ